# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ
ಕಲೆ: ಮನೋಹರ ಕೆ. ಆಚಾರ್ಯ



ಅಧ್ಯಾಯ 8

### ಪೇಟೆ ಬೀದಿಯ ಗೌಜುಗದ್ದಲದ ನಡುವೆ ಸೂರ್ಯೋದಯ

ಮೋಂಬತ್ತಿ ವ್ಯಾಪಾರ ಆರಂಭಿಸಿದ ಭಾವೇಶ್ ಭಾಟಿಯಾ ಅವರು ಆರಂಭದಲ್ಲಿ, ವಾರಾಂತ್ಯದಲ್ಲಿ ಮಾತ್ರ ಗಾಡಿ ತೆಗೆದುಕೊಂಡು ಹೋಗಿ ಮಾರುಕಟ್ಟೆಯಲ್ಲಿ ಬೀದಿ ಬದಿಯಲ್ಲಿ ಸ್ಟಾಲ್ ಹಾಕುತ್ತಿದ್ದರು. ಆದರೆ ಸ್ವಲ್ಪ ದಿನಗಳಲ್ಲಿ ಅರ್ಥವಾಯಿತು, ಗ್ರಾಹಕರನ್ನು ಪರಿಚಯ ಮಾಡಿಕೊಳ್ಳಬೇಕು ಎಂದರೆ, ಕೇವಲ ವಾರಾಂತ್ಯದಲ್ಲಿ ಮಾತ್ರ ಸ್ಟಾಲ್ ಹಾಕಿದರೆ ಅವರು ತನ್ನನ್ನು ಗುರುತಿಸುವುದಿಲ್ಲ. ಪ್ರತಿದಿನ ಹೋಗುವ ಅಗತ್ಯವಿತ್ತು. ಇಷ್ಟಲ್ಲದೆ, ಬೀದಿ ಬದಿಯ ಜಾಗ ಹಿಡಿದುಕೊಳ್ಳಲು ಭಾರೀ ಜಗಳಗಳೇ ಆಗುತ್ತಿದ್ದವು. ಎಲ್ಲೆಲ್ಲಿಂದಲೋ ಬೀದಿ ವ್ಯಾಪಾರಿಗಳು ಬಂದಿರುತ್ತಿದ್ದರು. ಇಂತಹ ಬಹಳಷ್ಟು ಬೀದಿ ಬದಿಯ ಅಂಗಡಿಗಳು ಬೂಟು–ಚಪ್ಪಲಿಗಳನ್ನು ಮಾರಾಟ ಮಾಡುತ್ತಿದ್ದವು. ಆ ವರ್ಷಗಳಲ್ಲಿ ಮಹಾಬಲೇಶ್ವರದಲ್ಲಿ ತಯಾರಾಗುವ ಚಪ್ಪಲಿಗಳು ಸಾಕಷ್ಟು ಪ್ರಸಿದ್ಧವಾಗಿದ್ದವು. ಇದರ ಲಾಭ ಪಡೆದು ಅನೇಕ ಬೀದಿ ವ್ಯಾಪಾರಿಗಳು ಮುಂಬಯಿಯ ಕಾರ್ಖಾನೆಯಲ್ಲಿ ತಯಾರಾದ ಚಪ್ಪಲಿಗಳನ್ನು ಹತ್ತು ಇಪ್ಪತ್ತು ಇಪ್ಪತ್ತೈದು ರೂಪಾಯಿಗೆ ಕೊಂಡು, ಇಲ್ಲಿ ಬಂದು ನೂರು, ನೂರಾ ಐವತ್ತು, ಹೀಗೆ ಮನಸ್ಸಿಗೆ ಬಂದ ಬೆಲೆಗೆ ಮಾರುತ್ತಿದ್ದರು. ಮಹಾಬಲೇಶ್ವರದ ಚಪ್ಪಲಿಗಳಿಗೆ ಬೇಡಿಕೆ ಇದ್ದ ಕಾರಣ, ಇವರುಗಳು ಎಲ್ಲಿ ಜಾಗ ಸಿಕ್ಕರೆ ಅಲ್ಲಿ ಒಂದು ಬಟ್ಟೆ ಹಾಸಿ, ತಮ್ಮ ಚಪ್ಪಲಿ ಹರಡಿ ಕುಳಿತುಬಿಡುತ್ತಿದ್ದರು. ಅವರಿಗೆ ಒಳ್ಳೆಯ ವ್ಯಾಪಾರವೂ ಇತ್ತು. ಹಾಗಾಗಿ ಆ ಮಾರ್ಕೆಟಿನ ತೆರೆದ ರಸ್ತೆಯ ಸಣ್ಣ ಜಾಗಕ್ಕೂ ತುಂಬಾ ಬೇಡಿಕೆ ಇತ್ತು.

ಭಾವೇಶ್ ಅವರಿಗೆ ತಮ್ಮ ನಾಲ್ಕು ಅಡಿ ಅಗಲ, ಮೂರು ಅಡಿ ಉದ್ದದ ಕೈಗಾಡಿಯನ್ನು ಹಾಕಲು ಜಾಗ ಸಿಗುವುದು ಕಷ್ಟವಾಗುತ್ತಿತ್ತು. ಹೀಗೆಂದೇ ಪ್ರತಿದಿನ ಹೋಗದಿದ್ದರೆ, ತಮ್ಮ ಜಾಗದ ಮೇಲೆ ಹತೋಟಿ ಇರುತ್ತಿರಲಿಲ್ಲ. ಪ್ರತಿದಿನ ಹೋಗಿ ತಮ್ಮ ಜಾಗ ಹಿಡಿದಿಟ್ಟುಕೊಳ್ಳುವುದು ಬಲು ದೊಡ್ಡ ಸಾಹಸವಾಗಿತ್ತು. ವ್ಯಾಪಾರ ಆಗಲಿ ಬಿಡಲಿ, ತಳ್ಳುಗಾಡಿಯ ಬಾಡಿಗೆ ದಿನಕ್ಕೆ ಐವತ್ತು ರೂಪಾಯಿ ಕೊಡಬೇಕಿತ್ತು. ಅಂದರೆ, ತಿಂಗಳಿಗೆ 1500 ರೂಪಾಯಿಯ ಆರ್ಥಿಕ ಭಾರ ಭಾವೇಶ್ ಅವರ ಮೇಲಿತ್ತು. ಜನರಿಗೆ ತಮ್ಮ ಮೋಂಬತ್ತಿಗಳನ್ನು ತಲುಪಿಸಲು ಸದ್ಯಕ್ಕೆ ಅವರಿಗಿದ್ದದ್ದು ಇದೊಂದೇ ಮಾರ್ಗ.

ಇರ್ಫಾನ್‌ನ ಸಹಾಯದಿಂದ, ಮಹಾಬಲೇಶ್ವರದ ಮಾರುಕಟ್ಟೆಯಲ್ಲಿ 'ಮಾರುತಿ ಮಂದಿರ'ದ ಹೊರಗೆ ಕೈಗಾಡಿ ಹಾಕುತ್ತಿದ್ದರು. ಹೆಚ್ಚು ಜನರ ಕಣ್ಣು ತಮ್ಮ ಮೋಂಬತ್ತಿಗಳ ಮೇಲೆ ಬೀಳಲಿ ಎಂಬುದು ಇವರ ಆಶಯ. ಆದರೆ ಶನಿವಾರ ಬರುವ ಭಕ್ತರ ಸಂಖ್ಯೆ ಹೆಚ್ಚಿರುತ್ತಿತ್ತು. ಹಾಗೆಂದೇ ತೆಂಗಿನಕಾಯಿ, ಎಣ್ಣೆ, ಹಾರ ಮಾರಾಟ ಮಾಡುವವರು ಬಂದು ಜಾಗ ಹಿಡಿದುಕೊಂಡು, ಭಾವೇಶ್ ಅವರಿಗೆ ಜಾಗ ಸಿಗುವುದು ಕಷ್ಟವಾಗುತ್ತಿತ್ತು. ಅಮ್ಮ ಹೇಳಿದ್ದ ಹಿತವಚನ ನೆನಪಿನಲ್ಲಿತ್ತು 'ಎಲ್ಲರನ್ನೂ ನಿನ್ನ ಗೆಳೆಯರನ್ನಾಗಿ ಮಾಡಿಕೋ'. ಈ ಸಲಹೆ ಇಲ್ಲಿ ಮತ್ತೆ ಕೆಲಸಕ್ಕೆ ಬಂದಿತು. ಕಾಕಾ, ದಾದಾ, ಮಾಮಾ ಎಂದು ಸಂಬೋಧಿಸುತ್ತಾ ಎಲ್ಲರನ್ನು ತಮ್ಮ ಆಪ್ತರನ್ನಾಗಿಸಿಕೊಂಡರು.

ಮಹಾಬಲೇಶ್ವರದಲ್ಲಿ ದೊಡ್ಡ ದೊಡ್ಡ ಕಂಪನಿಯ ಮತ್ತು ಬ್ರಾಂಡಿನ ಮೋಂಬತ್ತಿಗಳು ಎಲ್ಲ ಕಡೆಯಲ್ಲಿಯೂ ಸಿಗುತ್ತಿದ್ದವು. ಅದೇ ಮಹಾಬಲೇಶ್ವರದ ಮಾರುಕಟ್ಟೆಯಲ್ಲಿ ಅಲೆದು, ಯಾವ ಯಾವ ಬ್ರಾಂಡಿನ ಮೋಂಬತ್ತಿ ಸಿಗುತ್ತವೆ ಎಂದು ಅರಿತು ಬಂದರು. ಆಗಲೇ ಅವರಿಗೆ ಅನಿಸಿತು, 'ತಾನೇನಾದರೂ ಹೊಸದನ್ನು ಮಾಡಬೇಕಿದೆ'. ಬಾಲ್ಯದಿಂದಲೂ ಕರಕುಶಲ ಕೆಲಸಗಳಲ್ಲಿ ಚುರುಕಿದ್ದ ಭಾವೇಶ್, ತಮ್ಮ ಸೃಜನಶೀಲತೆಯನ್ನು ಕೆಲಸಕ್ಕೆ ಹಚ್ಚಿದರು. ಬಿಳಿಯ ಮೋಂಬತ್ತಿಗಳ ಮೇಲೆ ವಿವಿಧ ಬಣ್ಣದ ಜೆಲೆಟಿನ್ ಕಾಗದಗಳನ್ನು ಸುತ್ತಿ ಆಕರ್ಷಕವಾಗಿ ಮಾಡಿದರು. ಬೇರೆ ಬೇರೆ ಬಣ್ಣದ ಮೋಂಬತ್ತಿಗಳನ್ನು ತಯಾರಿಸಿ, ವಿವಿಧ ಡಬ್ಬಗಳಲ್ಲಿ ಜೋಡಿಸಿಟ್ಟರು.

ಕೆಲವೇ ತಿಂಗಳಲ್ಲಿ ಮತ್ತೇನಾದರೂ ಹೊಸದು ಮಾಡುವ ಪ್ರಯತ್ನದಲ್ಲಿ, ಬೇರೆ ಬೇರೆ ಆಕೃತಿಯ ಅಚ್ಚುಗಳನ್ನು ಕೊಂಡರು. ಆದರೆ